| ಶ್ರೀ ಭಗವಾನ್ ಮಹಾವೀರ್‌ಜೈನ್‌ಕಾಲೇಜು<br>ವಿ.ವಿ. ಪುರಂ, ಬೆಂಗಳೂರು–04<br>ಕಡಿತಗೊಳಿಸಲ್ಪಟ್ಟ ಪಠ್ಯಕ್ರಮಕ್ಕೆ ಅನುಗುಣವಾಗಿ<br>Mock Paper I | **Course:** ದ್ವಿತೀಯ ಪಿ.ಯು.ಸಿ<br>**Subject:** ಕನ್ನಡ<br>**Max. Marks:** 100 ಅಂಕಗಳು<br>**Duration:** 3 ಗಂಟೆ 15 ನಿಮಿಷಗಳು |
|---|---|

**ಸೂಚನೆ: ಪ್ರಶ್ನೆಪತ್ರಿಕೆಯ ಮೇಲೆ ಏನನ್ನೂ ಬರೆಯಬಾರದು.**

## 'ಅ'–ವಿಭಾಗ

**I. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣವಾಕ್ಯದಲ್ಲಿ ಉತ್ತರಿಸಿ: (1x10=10)**

1. ಸೀತೆ ರಾವಣನನ್ನು ಏನೆಂದು ಬೇಡಿಕೊಂಡಳು?
2. ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ?
3. ಯಾರ ಕಂಬನಿಯನ್ನೊರೆಸಿ ಜೀಸಸ್ ದಿನನಿತ್ಯ ಶಿಲುಬೆ ಏರಿದ್ದಾನೆ?
4. ತಾಯಿಯನ್ನು ಯಾವುದಕ್ಕೆ ಹೋಲಿಸಲಾಗಿದೆ?
5. ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರು?
6. ಕುದುಪನಿಗೆ ಹನಿಗಣ್ಣಾಗಲು ಕಾರಣವೇನು?
7. ಯಾವುದು ನಮ್ಮ ಮೈಗೆ ಹತ್ತುವುದು?
8. ಪೊಲೀಸರು ಏನೆಂದು ಮಹಜರು ಬರೆದುಕೊಂಡರು?
9. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು?
10. ಯಾವ ವಿಷಯ ಪ್ರಸ್ತಾಪಿಸಲು ಲೇಖಕರು ಮೀಟಿಂಗಿಗೆ ಹೋಗಿದ್ದರು?

## 'ಆ'–ವಿಭಾಗ

**II. ಇವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. (2x4=8)**

11. ಸೀತೆಯ ತಲ್ಲಣಕ್ಕೆ ಕಾರಣವೇನು?
12. ಹೆಂಡತಿಯ ಹರಿಬಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ?
13. ರಾಜ ಮತ್ತು ಮಂತ್ರಿಗಳಿಗೆ ಯಾವ ಅರ್ಹತೆ ಇರಬೇಕು?
14. ದುರ್ಜನರ ಕಾರ್ಯ ಯಾವ ಬಗೆಯದು?
15. ಹಡೆದ ತಂದೆತಾಯಿಯರ ಮಹತ್ವವನ್ನು ತಿಳಿಸಿ.

**(ಆ) ಇವುಗಳಲ್ಲಿ ಯಾವುದಾದರೂ ಮೂರು–ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. (2x3=6)**

16. ಧಣಿಯ ಬಡಿತದಿಂದ ಗುಡ್ಡಬಂಧಮುಕ್ತನಾದ ಬಗೆ ಹೇಗೆ?
17. ತಾನು ಅದೃಷ್ಟವಂತೆ ಎಂದು ಲೇಖಕಿ ಭಾವಿಸಲು ಕಾರಣವೇನು?
18. ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ?
19. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು?

**(ಇ) ಇವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. (2x3=6)**

20. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?
21. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?
22. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?
23. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?

## 'ಇ'–ವಿಭಾಗ

**III. (ಅ) ಇವುಗಳಲ್ಲಿ ಯಾವುದಾದರೂಎರಡನ್ನುಕುರಿತು ಸಂದರ್ಭಸೂಚಿಸಿ, ಸ್ವಾರಸ್ಯ ಬರೆಯಿರಿ. (3x2=6)**

24. ಮನ್ನಿಸಲಿ ನಿಮ್ಮನ್ನು ಆ ದೇವರೆ!
25. ಕೆಲವಂ ಬಲ್ಲವರಿಂದ ಕಲ್ತು
26. ತಾನೆ ಲಘುಮಾಡಿ ಲಘುವಾದನಯ್ಯ

**(ಆ) ಇವುಗಳಲ್ಲಿಯಾವುದಾದರೂಒಂದನ್ನುಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (3x1=3)**

27. ಇದೇ ಲೋಟವಲ್ಲವೇ ತನ್ನ ಬೆವರಿನ ಬೆಲೆ ಕಳೆದದ್ದು.
28. ಅದು ಅವರು ಆವರೆಗೂ ನೋಡಿರದ ಪ್ರಾಣಿ.

**(ಇ) ಇವುಗಳಲ್ಲಿ ಯಾವುದಾದರೂಒಂದನ್ನುಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (3x1=3)**

29. ವೆಪನ್ ಸಾರ್, ವೆಪನ್ ನಮಗೆ ಮುಖ್ಯ.
30. ಆನೆ ಬೇಲಿದಾಟಿಹೋಯ್ತು ಸಾರ್

## 'ಈ'–ವಿಭಾಗ

**IV. ಇವುಗಳಲ್ಲಿ ಯಾವುದಾದರೂಮೂರು ಪ್ರಶ್ನೆಗಳಿಗೆ ಐದಾರುವಾಕ್ಯಗಳಲ್ಲಿ ಉತ್ತರಿಸಿ: (4x3=12)**

31. ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?
32. ಉರಿಲಿಂಗಪೆದ್ದಿಯ ವಚನಗಳ ಆಶಯವೇನು?
33. ರಾವಣನಲ್ಲಿ ಕಂಡುಬರುವ ಪಶ್ಚಾತ್ತಾಪದ ಭಾವನೆಗಳೇನು?
34. ಬಂಗಾರ ನಿನಗೆ ಸ್ಥಿರವಲ್ಲ ಮಾತಿನ ಸ್ವಾರಸ್ಯವನ್ನು ಸಮರ್ಥಿಸಿ.

**(ಆ) ಇವುಗಳಲ್ಲಿ ಯಾವುದಾದರೂಎರಡು ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿರಿ. (4x2=8)**

35. ಬಸಲಿಂಗನಿಗೆ ಸಿಟ್ಟು ಬರಲು ಕಾರಣವೇನು? ಅದನ್ನು ಆತ ಯಾವ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ?
36. ರಾಷ್ಟ್ರಪತಿಯಾಗಿ ಆಯ್ಕೆಯಾದಾಗ ಚೆನ್ನೈನಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಕಲಾಂ ಹೇಳಿದ್ದೇನು? ವಿವರಿಸಿ.
37. ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಕನ್ನಡತನವಿಲ್ಲದಿರುವ ಬಗ್ಗೆ ಹಾಮಾನಾ ಹೇಗೆ ಟೀಕಿಸಿದ್ದಾರೆ.

**(ಇ) ಇವುಗಳಲ್ಲಿ ಯಾವುದಾದರೂಎರಡು ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿರಿ. (4x2=8)**

38. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?
39. ಪುಟ್ಟಯ್ಯ ತನ್ನ ಅಸಹಾಯಕತೆಯನ್ನು ಹೇಗೆ ವಿವರಿಸುತ್ತಾನೆ.
40. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೆ? ವಿವರಿಸಿ?

## 'ಉ'–ವಿಭಾಗ

**V. ಇವುಗಳಲ್ಲಿ ಒಂದು ಪದ್ಯದ ಭಾವವನ್ನು ವಿವರಿಸಿ. (5x1=5)**

41. ಇನ್ನು ಹುಟ್ಟದೆಯಿರಲಿ ನಾರಿಯ
ರೆನ್ನವೊಲು ಭಂಗಿತರು ಭುವನದೊ
ಳಿನ್ನು ಜನಿಸಲುಬೇಡ ಗಂಡರು ಭೀಮಸನ್ನಿಭರು
ಎನ್ನವೊಲು ಪಾಂಡವರವೊಲು ಸಂ
ಪನ್ನ ದುಃಖಿಗಳಾರು ನವೆದರು
ಮುನ್ನಿನವರೊಳಗೆಂದು ದ್ರೌಪದಿ ಹಿರಿದು ಹಲುಬಿದಳು.

**ಅಥವಾ**

42. ಮನಮನ ಬೆರೆಸಿದಲ್ಲಿ ತನು ಕರಗದಿದ್ದಡೆ,
ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದಡೆ,
ಕಂಡಾಗಳಶ್ರುಜಲಂಗಳು ಸುರಿಯದಿದ್ದಡೆ,
ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ;
ಕೂಡಲಸಂಗಮದೇವರ ಭಕ್ತಿಗಿದು ಚಿಹ್ನ?
ಎನ್ನಲ್ಲಿ ಇವಿಲ್ಲಾಗಿ, ಆನು ಡಂಬಕ ಕಾಣಿರೇ!

## VI. ಭಾಷಾಭ್ಯಾಸ:–

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ:–** **(2x6=12)**

**43. ಈ ಪದಗಳಿಗೆ ಅರ್ಥ ಬರೆಯಿರಿ.**
(1)ಆಸ್ಥೆ(2) ಪರದೇಶಿ

**44. ಈ ಪದಗಳ ಸಮಾನಾರ್ಥಗಳನ್ನು ಬರೆಯಿರಿ.**
(1) ಇನ (2) ಮಾಹೆ

**45. ಈ ಪದಗಳ ಗುಣವಾಚಕಗಳನ್ನು ಬರೆಯಿರಿ**
(1) ದೊಡ್ಡಬೆಟ್ಟ (2) ಎತ್ತರದ ಮಹಲು

**46. ಈ ಪದಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಹೆಸರನ್ನು ಬರೆಯಿರಿ.**
(1) ಹರೆಯಕ್ಕೆ (2) ಧಣಿಗಳಿಂದ

**47. ಈ ಪದಗಳನ್ನು ನಿಷೇಧರೂಪದಲ್ಲಿ ಬರೆಯಿರಿ.**
(1) ಆಡಿತು (2) ಹೋಗುವಳು

**48. ಈ ನುಡಿಗಟ್ಟುಗಳನ್ನು ಸ್ವಂತವಾಕ್ಯದಲ್ಲಿ ಬಳಸಿ.**
(1) ಕೈಯೊಡ್ಡು (2) ಎಮ್ಮೆತಮ್ಮಣ್ಣ

**49. ಈ ಕ್ರಿಯಾಪದಗಳ ಧಾತು ಗುರುತಿಸಿರಿ.**
(1) ಓದಿದನು (2) ಮಾಡಿದಾಗ

**(ಆ) ಇವುಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.** **(5x1=5)**

50. ಪ್ರಕೃತಿ ವಿಕೋಪಗಳು
51. ಸ್ತ್ರೀ ಭ್ರೂಣಹತ್ಯೆಯಿಂದ ಎದುರಾಗುವ ಸಮಸ್ಯೆಗಳು

**(ಇ) ಇವುಗಳಲ್ಲಿ ಯಾವುದಾದರೂ ಒಂದು ವಿಷಯದ ಬಗ್ಗೆ ಪತ್ರ ಬರೆಯಿರಿ.** **(4x1=4)**

52. ಶೈಕ್ಷಣಿಕ ಸಾಲ ಸೌಲಭ್ಯ ಕೋರಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಬರೆಯಬಹುದಾದ ಪತ್ರವನ್ನು ಸಿದ್ಧಪಡಿಸಿ.
53. ಇತ್ತೀಚೆಗೆ ನಿಮ್ಮ ಊರಿನಲ್ಲಿ ನಡೆದ ರಥೋತ್ಸವವನ್ನು ಕುರಿತು ಗೆಳೆಯ ಅಥವಾ ಗೆಳತಿಗೊಂದು ಪತ್ರ ಬರೆಯಿರಿ.

**(ಈ) ಇವುಗಳಲ್ಲಿ ಯಾವುದಾದರೂ ಒಂದು ಗಾದೆಮಾತನ್ನು ವಿಸ್ತರಿಸಿ.** **(4x1=4)**

54. ಕೂತು ಉಂಡರೆ, ಕುಡಿಕೆ ಹೊನ್ನು ಸಾಲದು.
55. ತುಂಬಿದ ಕೊಡ ತುಳುಕುವುದಿಲ್ಲ.

******